# ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನಲ್ಲಿ 'ಗೌಟ್ ಆರ್ಥ್ರೈಟಿಸ್‌ಗೆ' ಪರಿಣಮಕಾರಿ ಚಿಕಿತ್ಸೆ ಲಭ್ಯವಿದೆ

**ಡಾ. ಶ್ರೀಕಾಂತ್ ಮೋರ್ಲಾವರ್**
ಸಿಎಂಡಿ
ಹೋಮಿಯೊಕೇರ್ ಇಂಟರ್‌ನ್ಯಾಷನಲ್



ನಮ್ಮ ಶರೀರದಲ್ಲಿನ ಕೀಲುಗಳು ದೇಹದ ಚಲವನಗಳ ಪ್ರಕ್ರಿಯೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಕೆಲವೊಮ್ಮೆ ನೀವು ಬೆಳಗ್ಗೆ ನಿದ್ರೆಯಿಂದ ಎಚ್ಚೆತ್ತು ನಿಂತುಕೊಂಡ ತಕ್ಷಣ, ಕೆಲವು ಪ್ರಮುಖ ಕೀಲುಗಳಲ್ಲಿ ತೀವ್ರವಾದ ನೋವು ಬಾಧಿಸುತ್ತದೆ, ಉರಿತದ ಅನುಭವ ಉಂಟಾಗುತ್ತದೆ ಅಥವಾ ಹೆಬ್ಬೆರಳುಗಳು ಊದಿಕೊಂಡಿರುತ್ತವೆ. ಈ ರೀತಿಯ ನೋವುಗಳು ಗೌಟ್ ಎಂಬ ಕಾಯಿಲೆಯಲ್ಲಿ ಕಂಡುಬರುತ್ತವೆ. ಗೌಟ್ ಎಂದರೆ ಅದೊಂದು ರೀತಿಯ ನೋವು. ಈ ನೋವು, ಯೂರಿಕ್ ಆಮ್ಲದ ಮೆಟಾಬಲಿಸಂ ಕ್ರಿಯೆಯು ಸಮರ್ಪಕವಾಗಿ ನೆರವೇರದಿದ್ದಲ್ಲಿ ಗೋಚರಿಸುತ್ತದೆ. ಇತ್ತೀಚೆಗಿನ ದಿನಗಳಲ್ಲಿ ಗೌಟ್ ಕಾಯಿಲೆಯು ಎಲ್ಲಾ ಕಡೆಗಳಲ್ಲೂ ಕಂಡುಬರುತ್ತಿದೆ. 1000 ಜನರಲ್ಲಿ ಸುಮಾರು 45 ಜನರು ಗೌಟ್ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ತಿಳಿದುಬಂದಿರುತ್ತದೆ. ಈ ಕಾಯಿಲೆಯು ಮಹಿಳೆಯರಿಗಿಂತ 3 ಪಟ್ಟು ಅಧಿಕವಾಗಿ ಪುರುಷರಲ್ಲಿ ಗೋಚರಿಸುವ ಸಾಧ್ಯತೆಯಿದೆ. ಸಾಮಾನ್ಯವಾಗಿ, ನಮ್ಮ ದೇಹದೊಳಗಿರುವ ಯೂರಿಕ್ ಆಮ್ಲವು ಒಂದು ನಿರ್ದಿಷ್ಟ ಪ್ರಮಾಣದಲ್ಲಿರುತ್ತದೆ. ಯಾವಾಗ ಇದರ ಪ್ರಮಾಣವು ಅಗತ್ಯಕ್ಕಿಂತ ಅಧಿಕವಾಗುತ್ತದೆಯೊ, ಆವಾಗ ಊತಗಳು ಉಂಟಾಗುತ್ತವೆ ಮತ್ತು ಚಲನವಲನಗಳು ಕಠಿಣಗೊಳ್ಳುತ್ತವೆ. ಈ ಸ್ಥಿತಿಯನ್ನೇ 'ಗೌಟ್' ಎಂದು ಕರೆಯಲಾಗುತ್ತದೆ. ಇದು ಕೀಲುಗಳ ಮೇಲೆ ಪರಿಣಾಮ ಉಂಟು ಮಾಡುವುದರಿಂದಾಗಿ, ಇದನ್ನು 'ಗೌಟ್ ಆರ್ಥ್ರೈಟಿಸ್' ಎಂದು ಕೂಡ ಕರೆಯಲಾಗುತ್ತದೆ.

**ಲಕ್ಷಣಗಳು:** ಗೌಟ್ ಲಕ್ಷಣಗಳು ಬಹು ಮುಖ್ಯವಾಗಿವೆ. ಸಾಮಾನ್ಯವಾಗಿ ಈ ಸಮಸ್ಯೆಯು ಹೆಬ್ಬೆರಳ ಊತದೊಂದೊಗೆ ಪ್ರಾರಂಭವಾಗುತ್ತದೆ. ನೀವು ಬೆಳಗ್ಗೆ ನಿದ್ರೆಯಿಂದ ಎಚ್ಚೆತ್ತುಕೊಂಡ ತಕ್ಷಣ ಅಥವಾ ಮಧ್ಯರಾತ್ರಿ ಯಾವಾಗಲಾದ್ರೂ ಎಚ್ಚೆತ್ತಾಗ ಹೆಬ್ಬೆರಳುಗಳಲ್ಲಿ ತೀವ್ರವಾದ ನೋವು, ಊತ, ಉರಿತದ ಅನುಭವ ಉಂಟಾಗುವುದು ಮತ್ತು ಹೆಬ್ಬೆರಳುಗಳು ಕೆಂಪಗಾಗಿರುವುದು ಕಂಡುಬರುತ್ತದೆ. ಇವುಗಳು ಗೌಟ್ ಕಾಯಿಲೆಯ ಪ್ರಮುಖ ಲಕ್ಷಣಗಳಾಗಿವೆ. ಆರಂಭಿಕ ಹಂತಗಳಲ್ಲಿ ಇದು ಒಂದು ಅಥವಾ ಎರಡು ಕೀಲುಗಳಿಗೆ ಮತ್ತು ಹೆಬ್ಬೆರಳುಗಳಿಗೆ ಮಾತ್ರ ಸೀಮಿತವಾಗಿದ್ದರು ಕೂಡ, ಕ್ರಮೇಣ ದೇಹದ ಇತರ ಭಾಗಗಳ ಮೇಲೆಯೂ ಗೌಟ್ ತನ್ನ ಪ್ರಭಾವ ಬೀರಲು ಆರಂಭಿಸುತ್ತದೆ. ಇಂತಹ ಸಂದರ್ಭದಲ್ಲಿ ಇದನ್ನು ನಿರ್ಲಕ್ಷಿಸಿದರೆ, ಕಾಯಿಲೆಯ ಗಂಭೀರತೆಯು ಅಧಿಕಗೊಳ್ಳುತ್ತದೆ ಮತ್ತು ನಿಧಾನವಾಗಿ ಇದು ಕೀಲುಗಳ ಸಾಮರ್ಥ್ಯವನ್ನು ನಾಶಗೊಳಸುತ್ತದೆ. ಮೊದಲ ಬಾರಿ ಊತ ಕಾಣಿಸಿಕೊಂಡ ತಕ್ಷಣವೇ ಅಗತ್ಯ ಚಿಕಿತ್ಸೆ ಪಡೆದುಕೊಂಡಲ್ಲಿ, ಭವಿಷ್ಯದಲ್ಲಿ ಕೀಲುಗಳು ನಾಶಗೊಳ್ಳದಂತೆ ಈ ಸಮಸ್ಯೆಯನ್ನು ನಿವಾರಿಸಬಹುದಾಗಿದೆ.

**ತಪಾಸಣಾ ವಿಧಾನಗಳು:** ಒಂದು ವೇಳೆ ಯೂರಿಕ್ ಆಮ್ಲದ ಪ್ರಮಾಣವು ಅಧಿಕವಾಗಿದ್ದಲ್ಲಿ, ಧಿಡೀರಾಗಿ ಗೌಟ್ ಕಾಯಿಲೆ ಉಂಟಾಗಿದೆ ಎಂದು ಹೇಳಲಿಕ್ಕಾಗದು. ಒಂದು ವೇಳೆ ರಕ್ತದಲ್ಲಿ ಯೂರಿಕ್ ಆಮ್ಲದ ಪ್ರಮಾಣವು ಅಧಿಕವಾಗಿದ್ದಲ್ಲಿ ಮತ್ತು ಕೀಲುಗಳಲ್ಲಿ ಸಂಧಿವಾತ ರೀತಿಯ ನೋವು ಇದ್ದಲ್ಲಿ ಮಾತ್ರ ಅದನ್ನು ಗಂಭೀರವಾಗಿ ಗೌಟ್ ಕಾಯಿಲೆ ಎಂದು ಪರಿಗಣಿಸಲಾಗುತ್ತದೆ. ಇನ್ನಿತರ ವಿಭಿನ್ನ ಸಂದರ್ಭಗಳಲ್ಲಿ ಕೂಡ ರಕ್ತದಲ್ಲಿನ ಯೂರಿಕ್ ಆಮ್ಲದ ಶೇಕಡವಾರು ಪ್ರಮಾಣ ಅಧಿಕವಾಗಿ ಇರಬಹುದಾಗಿರುತ್ತದೆ. ಉದಾಹರಣೆಗೆ, ಸೋರಿಯಾಟಿಕ್ ಆರ್ಥ್ರೈಟಿಸ್, ಕಿಡ್ನಿ ವೈಫಲ್ಯತೆ ಮತ್ತು ಲ್ಯೂಕೆಮಿಯಾದಂತಹ ಕಾಯಿಲೆಗಳಿದ್ದರೆ ಕೂಡ ರಕ್ತದಲ್ಲಿ ಯೂರಿಕ್ ಆಮ್ಲದ ಪ್ರಮಾಣ ಅಧಿಕವಾಗಿರುತ್ತದೆ, ಹೀಗಾಗಿ 'ಗೌಟ್' ತಪಾಸಣೆ ಮಾಡಬೇಕಾದು ತುಂಬಾ ಮುಖ್ಯವಾಗಿದೆ. ಈ ಕಾಯಿಲೆಯ ತಪಾಸಣಾ ಪರೀಕ್ಷೆಯು ರಕ್ತ ಪರೀಕ್ಷೆಯ ಮೂಲಕ (ರಕ್ತದೊಳಗೆ ಅಧಿಕ ಪ್ರಮಾಣದಲ್ಲಿ ಯೂರಿಕ್ ಆಮ್ಲ ಶೇಖರಣೆ ಗೊಂಡಿರುವುದನ್ನು ಪತ್ತೆ ಮಾಡುವಂತಹ ಪರೀಕ್ಷೆಗಳಿಂದ ಈ ಕಾಯಿಲೆಯನ್ನು ತಪಾಸಿಸ-ಲಾಗುತ್ತದೆ) ಆರಂಭವಾಗುತ್ತದೆ. ಇಎಸ್‌ಆರ್ ಮಟ್ಟಗಳಲ್ಲಿನ ಹೆಚ್ಚಳ, ಎಕ್ಸ್-ರೇ ಮತ್ತು ಕೀಲುಗಳಲ್ಲಿ ಲಭ್ಯವಿರುವ ದ್ರವಗಳನ್ನು (ಕೀಲುಗಳಲ್ಲಿರುವ ದ್ರವಗಳ ನಮೂನೆಯನ್ನು ಪರೀಕ್ಷೆಗಾಗಿ ಹೊರ ತೆಗೆದುಕೊಳ್ಳುವುದು) ಪರೀಕ್ಷಿಸುವ ಮೂಲಕ ಇದನ್ನು ಪತ್ತೆ ಮಾಡಲಾಗುತ್ತದೆ.

**ಆಹಾರ ನಿರ್ಬಂಧಗಳು:** ಗೌಟ್‌ನಿಂದ ಬಳಲುತ್ತಿರುವ ರೋಗಿಗಳು ಪ್ರೋಟೀನ್ ಸೇವನೆಯನ್ನು ಕಡ್ಡಾಯವಾಗಿ ಕಡಿಮೆಗೊಳಿಸಬೇಕು. ಇನ್ನೂ ಮುಖ್ಯವಾಗಿ, 'ಹೈ-ಪ್ಯೂರಿನ್ ಡಯೆಟ್' ಅನ್ನು ಕಡ್ಡಾಯವಾಗಿ ಸೇವಿಸುವಂತಿಲ್ಲ, ಎರಡು ರೀತಿಯ ಪ್ರೋಟೀನ್‌ಗಳ ನಡುವಿನ, (ಪ್ಯೂರೈನ್ಸ್ ಮತ್ತು ಪಿರಿಮಿಡೈನ್ಸ್) ಪ್ಯೂರೈನ್ ಮಾದರಿಯ ಪ್ರೋಟೀನ್‌ಗಳನ್ನು ಅಧಿಕವಾಗಿ ಸೇವಿಸದಿರುವುದು ಕಡ್ಡಾಯ.



**ಮಾಂಸಾಹಾರ:** ಮೇಕೆ, ಕುರಿ ಮತ್ತು ಬೀಫ್‌ನಂತಹ ಪ್ರಾಣಿಗಳ ಮಾಂಸವನ್ನು ಸೇವಿಸದಿರುವುದು ಕಡ್ಡಾಯ.

**ಪ್ರಾಣಿಗಳ ಅಂಗಾಂಗ:** ಲಿವರ್, ಕಿಡ್ನಿ, ಬೋನ್ ಮ್ಯಾರೋ, ಇಂಟೆಸ್ಟೈನ್‌ಗಳನ್ನು ಸೇವಿಸದಿರುವುದು ಕಡ್ಡಾಯ.

**ಸಸ್ಯಾಹಾರ:** ಸ್ಪಿನಾಚ್, ಎಲೆಕೋಸು, ಹೂಕೋಸು, ಹುರುಳಿಕಾಯಿ, ವಿಭಿನ್ನ ರೀತಿಯ ಹುರುಳಿಗಳು ಮತ್ತು ಅಣಬೆ ಸೇವನೆಯನ್ನು ಕಡ್ಡಾಯವಾಗಿ ಕಡಿತಗೊಳಿಸತಕ್ಕದ್ದು. ಮದ್ಯ ಮತ್ತು ಬಿಯರ್ ಸೇವನೆಯನ್ನು ಕಡ್ಡಾಯವಾಗಿ ವರ್ಜಿಸತಕ್ಕದ್ದು.

**ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನಲ್ಲಿ ಲಭ್ಯವಿರುವ ಚಿಕಿತ್ಸೆ:** ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನಲ್ಲಿ ಗೌಟಿ ಆರ್ಥ್ರೈಟಿಸ್ ಕಾಯಿಲೆಗೆ ಪರಿಣಾಮಕಾರಿ ಚಿಕಿತ್ಸೆ ಲಭ್ಯವಿದೆ. ಈ ಚಿಕಿತ್ಸೆಯಲ್ಲಿ, ರೋಗಿಯ ಮಾನಸಿಕ ಮತ್ತು ದೈಹಿಕ ಸ್ಥಿತಿಗತಿಗಳನ್ನು ಪರೀಕ್ಷಿಸಿ, ಅವುಗಳ ಫಲಿತಾಂಶಗಳ ಆಧಾರದಲ್ಲಿ ಸೂಕ್ತವಾದ ಚಿಕಿತ್ಸೆ ನೀಡಲಾಗುತ್ತದೆ. ಅಲ್ಲದೆ, ಕೀಲುಗಳಲ್ಲಿ ಯೂರಿಕ್ ಆಮ್ಲದ ಹರಳುಗಳು ಸೃಷ್ಟಿಗೊಳ್ಳದಂತೆ ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ ರಕ್ತ ಪರಿಚಲನೆಯಲ್ಲಿರುವ ವಿಭಿನ್ನ ರಸಾಯನಿಕಗಳ ಸಮತೋಲನತೆಯನ್ನು ಸರದೂಗಿಸುವ ಮೂಲಕ ಗೌಟ್ ಕಾಯಿಲೆಯನ್ನು ನಿವಾರಿಸಬಹುದಾಗಿದೆ.



"ನನ್ನ ಹೆಸರು ಜೆ. ನಾಗುರ್ಜನ (ಪೇಷಂಟ್ ಐಡಿ. EDR43). ನಾನು ಕಳೆದ ಹಲವಾರು ವರ್ಷಗಳಿಂದ ಮಂಡಿ ನೋವಿನಿಂದ ಬಳಲುತ್ತಿದ್ದೆ. ಇದಕ್ಕೆ ಚಿಕಿತ್ಸೆ ಪಡೆಯಲೆಂದು ಒಂದು ಪ್ರತಿಷ್ಠಿತ ಆಸ್ಪತ್ರೆಗೆ ಭೇಟಿ ನೀಡಿದ್ದೆ. ಅಲ್ಲಿನ ವೈದ್ಯರ ಸಲಹೆಯ ಪ್ರಕಾರ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿದಾಗ ನಾನು 'ಗೌಟಿ ಸಂಧಿವಾತ' ಕಾಯಿಲೆಗೆ ಈಡಾಗಿರುವುದು ತಿಳಿದುಬಂದಿತು. ನಂತರ ಸುಮಾರು ವರ್ಷಗಳವರೆಗೆ ವಿವಿಧ ಔಷಧಿಗಳನ್ನು ಸೇವಿಸಿದೆ. ಅದಾಗ್ಯೂ, ನನ್ನ ರಕ್ತದೊಳಗಿನ ಯೂರಿಕ್ ಆಮ್ಲದ ಪ್ರಮಾಣವು ಕಡಿಮೆಯಾಗಲಿಲ್ಲ. ಮಂಡಿ ನೋವು ಇನ್ನೂ ಗಂಭಿರವಾಗಿ, ನಾನು ತುಂಬಾ ನರಳತೊಡಗಿದ್ದೆ. ಒಂದು ದಿನ ಟೆಲಿವಿಷನ್‌ನಲ್ಲಿ ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ನ ಜಾಹೀರಾತು ನೋಡಿ, ಅವರನ್ನು ಕಂಡು ಸಮಾಲೋಚಿಸಿದೆ. ನಂತರ ಚಿಕಿತ್ಸೆ ಪಡೆಯಲೂ ಪ್ರಾರಂಭಿಸಿದೆ. ಸುಮಾರು 8 ತಿಂಗಳಿಗೂ ಹೆಚ್ಚಾಗಿ ನಾನು ಕಾನ್‌ಸ್ಟಿಟ್ಯೂಷನಲ್ ಹೋಮಿಯೊಪಥಿಕ್ ಔಷಧಿಗಳನ್ನು ಸೇವಿಸಿದೆ. ಕಾಲಾಂತರದಲ್ಲಿ ಕ್ರಮೇಣ ನೋವಿನಿಂದ ಗುಣಮುಖನಾದೆ. ಇದೀಗ ನಾನು ಮೊದಲಿನಂತೆ ಯಾವುದೇ ನೋವಿನ ಸಮಸ್ಯೆ ಇಲ್ಲದೆಯೇ ನನ್ನ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹೋಮಿಯೊಕೇರ್ ಇಂಟರ್‌ನ್ಯಾಷನಲ್‌ಗೆ ಧನ್ಯವಾದಗಳು."

HOMEOCARE INTERNATIONAL
ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಶುಲ್ಕ ರಹಿತ 1800 108 1212

ಉಚಿತ ಸಮಾಲೋಚನೆ 955 000 1133

www.homeocare.in